ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/17/ಎಸಿಎಂ (2)/2013-14

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 23-05-2013.

## -:: ಪ್ರವೇಶಾಧಿಸೂಚನೆ ::-

**ವಿಷಯ:-** 2013-14ನೇ ಸಾಲಿನಲ್ಲಿ ಐಟಿಐ ವಿದ್ಯಾರ್ಥಿಗಳಿಗೆ 2ನೇ ವರ್ಷ / 3ನೇ ಸೆಮಿಸ್ಟರ್ ಡಿಪ್ಲೋಮಾಗೆ ಲ್ಯಾಟರಲ್ ಎಂಟ್ರಿ ಸ್ಕೀಂ ಮುಖಾಂತರ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ OFF-LINE ಮೂಲಕ ಪ್ರವೇಶ ನೀಡುವ ಬಗ್ಗೆ.

**ಉಲ್ಲೇಖ:-**
1. ಸರ್ಕಾರದ ಆದೇಶ ಸಂ. ಇಡಿ/161/ಟಿಪಿಇ/2011, ದಿ:15-07-2011.
2. ಸರ್ಕಾರದ ಆದೇಶ ಸಂ. ಇಡಿ 145 ಟಿಪಿಇ 2012, ದಿ:16-06-2012.

-000000000-

2013-14ನೇ ಸಾಲಿಗೆ ಸರ್ಕಾರದಿಂದ ಹಾಗೂ ಎ.ಐ.ಸಿ.ಟಿ.ಇ ಯಿಂದ ಮಾನ್ಯತೆ ಪಡೆದ ರಾಜ್ಯದಲ್ಲಿನ ಎಲ್ಲಾ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಐ.ಟಿ.ಐ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಗೆ 2ನೇ ವರ್ಷ / 3ನೇ ಸೆಮಿಸ್ಟರ್ ಡಿಪ್ಲೋಮಾಗೆ ಲ್ಯಾಟರಲ್ ಎಂಟ್ರಿ ಸ್ಕೀಂ ಮುಖಾಂತರ ಪ್ರವೇಶಕ್ಕೆ ಎ.ಐ.ಸಿ.ಟಿ.ಇ ಯ ಪ್ರವೇಶ ಮಾರ್ಗಸೂಚಿ ಪ್ರಕಾರ ಉಲ್ಲೇಖ(1)ರಲ್ಲಿನ ಸರ್ಕಾರದ ಆದೇಶದಲ್ಲಿ ಅನುಮತಿ ನೀಡಲಾಗಿದೆ.

ಈ ಕೆಳಗೆ ನಮೂದಿಸಲಾದ ಅನುಬಂಧದಲ್ಲಿನಂತೆ 02 ವರ್ಷಗಳ ಐ.ಟಿ.ಐ ಟ್ರೇಡ್‌ನ್ನು ತೇರ್ಗಡೆ ಹೊಂದಿದ್ದಲ್ಲಿ ಅದು ಮೊದಲನೇ ವರ್ಷದ ಡಿಪ್ಲೋಮಾ ಕೋರ್ಸಿಗೆ ಸಮಾನಾಂತರವೆಂದು ಪರಿಗಣಿಸಲಾಗಿದ್ದು, ಹಾಗೂ ಸದರಿ ಅಭ್ಯರ್ಥಿಗಳಿಗೆ 2ನೇ ವರ್ಷ / 3ನೇ ಸೆಮಿಸ್ಟರ್ ಡಿಪ್ಲೋಮಾಗೆ ನೇರ ಪ್ರವೇಶ ನೀಡಲು ಪಾಲಿಟೆಕ್ನಿಕ್‌ಗಳ ಕೋರ್ಸುಗಳಿಗೆ ಎ.ಐ.ಸಿ.ಟಿ.ಇ ಮತ್ತು ಸರ್ಕಾರ ನಿಗಧಿಪಡಿಸಿದ ಇಂಟೇಕ್‌ಗೆ ಹೆಚ್ಚುವರಿಯಾಗಿ (Over and above Intake) ಶೇ.20 ರಷ್ಟು ಸ್ಥಾನಗಳನ್ನು ಕಾಯ್ದಿರಿಸಲಾಗಿದೆ.

## ANNEXURE - I

| Sl. No | ITI Trades | Duration in years | Equivalent Diploma Course | Bridge Course subjects (Common to all Trades) |
|---|---|---|---|---|
| (1) | (2) | (3) | (4) | (5) |
| 1 | Attendant Operator ( Chemical Plant ) | 2 | Chemical | **3rd Semester:** 1. Applied Mathematics-I 2. English Communication **4th Semester:** 1. Applied Mathematics-II |
| 2 | Draftsman(Civil) | 2 | Civil/Environmental/PHE/Construction Tech./Water Tech./Civil Draftsmanship | |
| 3 | Draftsman (Mechanical) | 2 | Mechanical/ WSM/ MTT/ IT/ HPT | |
| 4 | Electrician | 2 | E&E/E&C | |
| 5 | Electronic Mechanic | 2 | E&C/E&E | |
| 6 | Electroplater | 2 | E&E/ Chemical | |
| 7 | Fitter | 2 | Mechanical/ WSM/ MTT/ IT/ HPT | |
| 8 | Instrument Mechanic | 2 | Mechanical/ WSM/ MTT/ IT/ HPT | |

| | | | | |
|---|---|---|---|---|
| 9 | Surveyor | 2 | Civil/ Environmental/ PHE/ Construction Tech./Water Tech./Civil Draftsmanship | **3rd Semester:**<br>1. Applied Mathematics-I<br>2. English Communication<br>**4th Semester:**<br>1. Applied Mathematics-II |
| 10 | Instrument Mechanic ( Chemical Plant) | 2 | Chemical | |
| 11 | Lab Assistant ( Chemical Plant) | 2 | Chemical | |
| 12 | Machinist | 2 | Mechanical/ WSM/ MTT/ IT/ HPT | |
| 13 | Machinist(Grinder) | 2 | Mechanical/ WSM/ MTT/ IT/ HPT | |
| 14 | Maintenance Mechanic (Chemical Plant) | 2 | Chemical | |
| 15 | Mechanic (Motor Vehicle) | 2 | Automobile/Mechanical/ WSM/ MTT/ IT/ HPT | |
| 16 | Mechanic (Refrigeration and Air conditioning) | 2 | HPT,/Mechanical | |
| 17 | Mechanic (Radio & TV) | 2 | E&C | |
| 18 | Mechanic (Machine Tool Maintenance) | 3 | Mechanical/ MTT | |
| 19 | Turner | 2 | Mechanical/ MTT | |
| 20 | Information Technology & Electronics Systems Maintenance (IT &ESM) | 2 | E&C/CS/ IS/ EI&C | |
| 21 | Tool and Die Making (Press tools, Jigs and Fixtures) | 3 | Mechanical/MTT/ WSM | |
| 22 | Production & Manufacturing | 2 | MTT/ WSM/Mechanical | |
| 23 | Automobile | 2 | Automobile | |
| 24 | Electrical | 2 | E&E | |
| 25 | Electronics | 2 | E&C | |
| 26 | Refrigeration and Air conditioning | 2 | HPT | |
| 27 | Fabrication | 2 | Mechanical/MTT/ WSM | |

ಮೇಲ್ಕಂಡ ಅನುಬಂಧದಲ್ಲಿ ನಮೂದಿಸಿರುವ ಐ.ಟಿ.ಐ ಟ್ರೇಡ್‌ನಲ್ಲಿ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಗೆ ಕಾಲಂ ನಂ.(4)ರಲ್ಲಿ ನಮೂದಿಸಿರುವ ಡಿಪ್ಲೋಮಾ ಕೋರ್ಸುಗಳಿಗೆ ನೇರವಾಗಿ 2ನೇ ವರ್ಷ / 3ನೇ ಸೆಮಿಸ್ಟರ್ ಡಿಪ್ಲೋಮಾಗೆ ಪ್ರವೇಶ ನೀಡಬಹುದಾಗಿರುತ್ತದೆ. ಈ ಕೋಟಾದಡಿ ಪ್ರವೇಶ ಪಡೆದ ಅಭ್ಯರ್ಥಿಗಳು ಮೇಲ್ಕಂಡ ಅನುಬಂಧದ ಕಾಲಂ ನಂ.(05) ರಲ್ಲಿ ನಮೂದಿಸಿರುವಂತೆ 3ನೇ ಸೆಮಿಸ್ಟರ್‌ನಲ್ಲಿ 02 ವಿಷಯಗಳನ್ನು ಮತ್ತು 4ನೇ ಸೆಮಿಸ್ಟರ್‌ನಲ್ಲಿ 01 ವಿಷಯವನ್ನು ಹೆಚ್ಚುವರಿಯಾಗಿ (Bridge Course) ಕಡ್ಡಾಯವಾಗಿ ವ್ಯಾಸಂಗ ಮಾಡಿ ಉತ್ತೀರ್ಣರಾಗುವ ಷರತ್ತಿಗೊಳಪಟ್ಟಿರುತ್ತದೆ.

1. **ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಅರ್ಜಿ ಪಡೆಯುವ ಹಾಗೂ ಸಲ್ಲಿಸುವ ವಿಧಾನ:**

1. ಅರ್ಜಿಗಳನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ವೆಬ್‌ಸೈಟ್ **www.dte.kar.nic.in, www.dtekarnataka.in & www.diplomaadmission.in** ನಲ್ಲಿ ಇರುತ್ತದೆ. ಈ ಅರ್ಜಿಯನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ (DownLoad) ಮಾಡಿಕೊಂಡು, ಸದರಿ ಅರ್ಜಿಯನ್ನು ಭರ್ತಿ ಮಾಡಿ ಸಂಬಂಧಿಸಿದ 21 ನೋಡಲ್ ಸೆಂಟರ್‌ಗೆ ಅರ್ಜಿ ಸಲ್ಲಿಸುವುದು. ಸಂಪೂರ್ಣವಾಗಿ ಭರ್ತಿ ಮಾಡಿದ ಅರ್ಜಿ ಸಲ್ಲಿಸುವಾಗ ಅರ್ಜಿಯ ಜೊತೆಗೆ ಅರ್ಜಿ ಶುಲ್ಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 ರ ಅಭ್ಯರ್ಥಿಗಳಿಗೆ – ₹ 50/- ಹಾಗೂ ಇತರೇ ಗುಂಪಿನ ಅಭ್ಯರ್ಥಿಗಳಿಗೆ ₹ 100/-ನ್ನು ರಾಜ್ಯದ ಯಾವುದೇ **"STATE BANK OF MYSORE"** ಶಾಖೆಗಳಿಂದ ಉಳಿತಾಯ ಖಾತೆ ಚಲನ್ ಪಡೆದು **'ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು"** ಇವರ ಉಳಿತಾಯ ಖಾತೆ ಸಂಖ್ಯೆ:**64097386381** ಗೆ ಶುಲ್ಕ ಪಾವತಿಸಿ, **Counter Foil** ನ್ನು ಪಡೆದು 21 ನೋಡಲ್ ಸೆಂಟರ್‌ಗಳಲ್ಲಿ ಕಡ್ಡಾಯವಾಗಿ ಪಾವತಿಸತಕ್ಕದ್ದು. (21 ನೋಡಲ್ ಸೆಂಟರ್‌ಗಳ ವಿವರವನ್ನು **ANNEXURE - II** ರಲ್ಲಿ ನೀಡಲಾಗಿದೆ).

ಅರ್ಜಿಗಳನ್ನು ದಿನಾಂಕ:**29-05-2013** ರಿಂದ ಮೇಲ್ಕಂಡ ವೆಬ್‌ಸೈಟ್‌ನಿಂದ ಡೌನ್‌ಲೋಡ್ (DownLoad) ಮಾಡಿಕೊಳ್ಳವಹುದಾಗಿದೆ. ಅರ್ಹ ಅಭ್ಯರ್ಥಿಗಳು ಪೂರ್ಣ ಪ್ರಮಾಣದಲ್ಲಿ ಭರ್ತಿ ಮಾಡಲಾದ ಅರ್ಜಿಯನ್ನು ಪ್ರವೇಶ ಬಯಸುವ 21 ನೋಡಲ್ ಸೆಂಟರ್‌ಗೆ ದಿನಾಂಕ: **24-06-2013 ರಂದು ಸಂಜೆ 5.30 ಗಂಟೆಯ** ಒಳಗಾಗಿ ಸಲ್ಲಿಸತಕ್ಕದ್ದು. ಹಾಗೂ ಎಸ್.ಎಸ್.ಎಲ್.ಸಿ ಮತ್ತು ಐ.ಟಿ.ಐ ವ್ಯಾಸಂಗದ ಅಂಕಪಟ್ಟಿಗಳ ಧೃಡೀಕರಿಸಿದ ಜೆರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ಅರ್ಜಿಯ ಜೊತೆ ಲಗತ್ತಿಸುವುದು.

ಅಪೂರ್ಣವಾದ ಅರ್ಜಿಗಳನ್ನು ಅಥವಾ ಅಂತಿಮ ದಿನಾಂಕದ ನಂತರ ತಲುಪುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. 21 ನೋಡಲ್ ಸೆಂಟರ್ ಹಾಗೂ ಪಾಲಿಟೆಕ್ನಿಕ್‌ಗಳ ವಿವರ ಮತ್ತು ಪ್ರವೇಶಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಸಂಬಂಧಿಸಿದ ನೋಡಲ್ ಸೆಂಟರ್‌ಗಳಲ್ಲಿ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಯ ವೆಬ್‌ಸೈಟ್ **www.dte.kar.nic.in, www.dtekarnataka.in & www.diplomaadmission.in** ನಲ್ಲಿ ಪಡೆಯಬಹುದಾಗಿರುತ್ತದೆ. ಅರ್ಜಿ ಸಲ್ಲಿಸುವ ಮುನ್ನ ಅಭ್ಯರ್ಥಿಗಳು ಸೂಚನೆಗಳನ್ನು ತಪ್ಪದೇ ಓದಿಕೊಳ್ಳತಕ್ಕದ್ದು.

2. **ಡಿಪ್ಲೋಮಾ ಪ್ರವೇಶಕ್ಕೆ ಇರಬೇಕಾದ ಅರ್ಹತೆ :**

**ಅಭ್ಯರ್ಥಿಯು ಭಾರತೀಯ ಪ್ರಜೆಯಾಗಿರಬೇಕು; ಮತ್ತು**

ಅ) ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಕರ್ನಾಟಕದಲ್ಲಿ 02 ವರ್ಷಗಳ ಐ.ಟಿ.ಐ ವ್ಯಾಸಂಗ ಮಾಡಿ ಉತ್ತೀರ್ಣರಾಗಿರಬೇಕು.

ಅ) ಅಭ್ಯರ್ಥಿಯು ಕರ್ನಾಟಕದಲ್ಲಿ 1ನೇ ತರಗತಿಯಿಂದ 02 ವರ್ಷಗಳ ಐ.ಟಿ.ಐ [ಎಸ್.ಎಸ್.ಎಲ್.ಸಿ (10ನೇ ತರಗತಿ) ಪರೀಕ್ಷೆಯನ್ನೊಳಗೊಂಡು] ವ್ಯಾಸಂಗದವರೆಗೆ 05 ವರ್ಷಗಳ ವ್ಯಾಸಂಗ ಮಾಡಿರಬೇಕು.

3. **ಕರ್ನಾಟಕದಲ್ಲಿ ಕನಿಷ್ಠ 05 ವರ್ಷಗಳ ವ್ಯಾಸಂಗ ಮಾಡಿರಬೇಕೆಂಬ ಷರತ್ತಿನಿಂದ ಕೆಳಕಂಡ ಪ್ರವರ್ಗಗಳ ಅಭ್ಯರ್ಥಿಗಳಿಗೆ (ಎ ಇಂದ ಜಿ ಯವರೆಗೆ) ವಿನಾಯಿತಿ ಇರುತ್ತದೆ.**

ಎ) ಸೈನಿಕರ, ಕೇಂದ್ರ ಸರ್ಕಾರಿ ನೌಕರರ, ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಗಳು ಅಥವಾ ಜಂಟಿ ಸಹಯೋಗದ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಮಕ್ಕಳಿಗೆ ಸಂಬಂಧಿಸಿದ ತಂದೆ/ಪೋಷಕರು ಕರ್ನಾಟಕದಲ್ಲಿ ಕನಿಷ್ಠ 12 ತಿಂಗಳವರೆಗೆ (ಅಂದರೆ ಪ್ರವೇಶ ವರ್ಷದ ಜುಲೈ 01ಕ್ಕೆ) ಕರ್ನಾಟಕದಲ್ಲಿ ಕೆಲಸ ಮಾಡಿರಬೇಕು.

ಬಿ) ಅಖಿಲ ಭಾರತ ಸೇವೆಯ ಕರ್ನಾಟಕ ವೃಂದದಲ್ಲಿ ಸೇವೆ ಸಲ್ಲಿಸಿದ್ದ ಅಥವಾ ಸೇವೆ ಸಲ್ಲಿಸುತ್ತಿರುವ ಹಾಗೂ ರಾಜ್ಯದಲ್ಲಿ ಸೇವೆ ಸಲ್ಲಿಸಿದ್ದ ಅಥವಾ ಸೇವೆ ಸಲ್ಲಿಸುತ್ತಿರುವ ನೌಕರರ ಮಕ್ಕಳು ಕರ್ನಾಟಕೇತರ ಪ್ರದೇಶದಲ್ಲಿ 01ನೇ ತರಗತಿಯಿಂದ 02 ವರ್ಷಗಳ ಐ.ಟಿ.ಐ ವ್ಯಾಸಂಗ ಮಾಡಿದ ಅವಧಿಗೆ ಅಂದರೆ ಅಭ್ಯರ್ಥಿಯ ತಂದೆ/ಪೋಷಕರು ಕರ್ನಾಟಕೇತರ ಪ್ರದೇಶದಲ್ಲಿ ದಿನಾಂಕ:01-07-2013ರ ವರೆಗೆ ಕೆಲಸ ನಿರ್ವಹಿಸಿದಲ್ಲಿ ಅಂತಹ ಅಭ್ಯರ್ಥಿಗಳಿಗೆ.

ಸಿ) ಸೈನಿಕ/ಮಾಜಿ ಸೈನಿಕ (ಕನಿಷ್ಠ 05 ವರ್ಷಗಳ ಸೇವೆ ಸಲ್ಲಿಸಿರಬೇಕು) ಇವರು ಸೇವೆಗೆ ಸೇರುವ ಸಮಯದಲ್ಲಿ ಕರ್ನಾಟಕದ ನಿವಾಸಿ ಎಂದು ಧೃಡಪಡಿಸಲು ನೀಡಿರುವ ವಾಸಸ್ಥಳದ ವಿಳಾಸವು ಕರ್ನಾಟಕದ್ದಾಗಿರಬೇಕು. ಈ ದಾಖಲೆಯನ್ನು ಡಿಫೆನ್ಸ್ ಯನಿಟ್ಸ್ ಅಥವಾ ಕಾರ್ಯದರ್ಶಿ, ರಾಜ್ಯ/ಜಿಲ್ಲಾ ಸೈನಿಕ್ ಬೋರ್ಡ್ ಇವರಿಂದ ನೀಡಲ್ಪಟ್ಟ ಪ್ರಮಾಣ ಪತ್ರವನ್ನು ಸೀಟು ಆಯ್ಕೆಯ ಪ್ರಕ್ರಿಯೆ ಸಮಯದಲ್ಲಿ ಒದಗಿಸಬೇಕು. ಇಂತಹ ಸೈನಿಕ/ಮಾಜಿ ಸೈನಿಕ ಮಕ್ಕಳಿಗೆ

ಡಿ) ಕನಾಟಕದಿಂದ ಆರಿಸಲ್ಪಟ್ಟ ಲೋಕಸಭಾ ಸದಸ್ಯರ ಮಕ್ಕಳಿಗೆ;

ಲೋಕಸಭಾ ಸದಸ್ಯತ್ವ ಅವಧಿಯಲ್ಲಿ ಅವರ ಮಕ್ಕಳು 01ನೇ ತರಗತಿಯಿಂದ ಅರ್ಹತಾ ಪರೀಕ್ಷೆಯವರೆಗೆ ದೆಹಲಿ ವ್ಯಾಸಂಗ ಮಾಡಿದ ಅವಧಿಗೆ.

ಇ) ಕೇಂದ್ರ ಸರ್ಕಾರಿ ನೌಕರರು ಸೇವೆಗೆ ಸೇರುವ ಸಮಯದಲ್ಲಿ ಕರ್ನಾಟಕದವರೆಂದು ದೃಢಪಡಿಸಲು ನೀಡಿರುವ ದಾಖಲೆಗಳನ್ವಯ, ಕರ್ನಾಟಕೇತರ ಪ್ರದೇಶದಲ್ಲಿ ಕಾರ್ಯ ನಿರ್ವಹಿಸಿದ ಅಥವಾ ಕಾರ್ಯನಿರ್ವಹಿಸುತ್ತಿರುವ ನೌಕರರ ಮಕ್ಕಳು ಕರ್ನಾಟಕದಲ್ಲಿ 01ನೇ ತರಗತಿಯಿಂದ 02 ವರ್ಷಗಳ ಐ.ಟಿ.ಐ ವರೆಗೆ ಕನಿಷ್ಠ 05 ವರ್ಷಗಳವರೆಗೆ ವ್ಯಾಸಂಗ ಮಾಡಿದ್ದಲ್ಲಿ.

ಎಫ್) ಕೇಂದ್ರ ಸರ್ಕಾರಿ ನೌಕರರನ್ನು ಹೊರತುಪಡಿಸಿ ದೇಶದ ಯಾವುದೇ ಭಾಗಕ್ಕೆ ವರ್ಗಾವಣೆಯಾಗುವ ಅವಕಾಶವಿರುವಂತಹ ಇತರೆ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಪ್ರವೇಶ ವರ್ಷದ ಅವಧಿಯ ದಿನಾಂಕ: 01-07-2013ಕ್ಕೆ ಕನಿಷ್ಠ 12 ತಿಂಗಳು ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ/ವಾಸಿಸುತ್ತಿದ್ದಲ್ಲಿ; ಮತ್ತು;

- ಅಂತಹವರ ಮಗ/ಮಗಳು ಅರ್ಹತಾ ತರಗತಿಯನ್ನು ಕರ್ನಾಟಕದ ಯಾವುದೇ ಅಧಿಕೃತ ಶಾಲೆಯಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರಬೇಕು.
- ಅಭ್ಯರ್ಥಿಯ ತಂದೆ ಅಥವಾ ತಾಯಿ ಕರ್ನಾಟಕದಲ್ಲಿ ಕನಿಷ್ಠ 10 ವರ್ಷಗಳವರೆಗೆ ವ್ಯಾಸಂಗ ಮಾಡಿರಬೇಕು- ಇಂತಹವರ ಮಕ್ಕಳು.

**ಸೂಚನೆ: ಕರ್ನಾಟಕೇತರ ಎಸ್.ಎಸ್.ಎಲ್.ಸಿ ಪಾಸಾದ ಅಭ್ಯರ್ಥಿಗಳು ತಾಂತ್ರಿಕ ಪರೀಕ್ಷಾ ಮಂಡಳಿ, ಅರಮನೆ ರಸ್ತೆ, ಬೆಂಗಳೂರು – 560 001 ಇಲ್ಲಿಂದ ಸೀಟು ಆಯ್ಕೆ ಪ್ರಕ್ರಿಯೆಯ ಮೊದಲು ಅರ್ಹತಾ ಪ್ರಮಾಣ ಪತ್ರವನ್ನು ಪಡೆದು ಸೀಟು ಆಯ್ಕೆ ಪ್ರಕ್ರಿಯೆಯ ಸಮಯದಲ್ಲಿ ಹಾಜರುಪಡಿಸಬೇಕು.**

**ಜಿ) ವಿಕಲಚೇತನರು:**

ದೇಹದ ಅಂಗವಿಕಲತೆಯು ಕನಿಷ್ಠ ಶೇ.40ಕ್ಕಿಂತ ಕಡಿಮೆ ಇಲ್ಲದೆ ಇರುವಂತಹ ಹಾಗೂ ಕಣ್ಣು ದೃಷ್ಟಿಯು 6/60 ಅಥವಾ 20/2000 ಸೆಲನ್‌ಗಿಂತ ಹೆಚ್ಚಿಗೆ ಇರಬಾರದು ಅಥವಾ ಕೇಳುವ ಸಾಮಾರ್ಥ್ಯ 70 ಡೆಸಿಬಲ್ಸ್‌ಗಿಂತ ಹೆಚ್ಚಿಗೆ ಇರಬೇಕು. ಇಂತಹ ಅಭ್ಯರ್ಥಿಗಳು ಮಾತ್ರ ವಿಕಲಚೇತನ ಕೋಟಾದಲ್ಲಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

**ಹೆಚ್) ಗ್ರಾಮೀಣ ಅಭ್ಯರ್ಥಿಗಳು:**

ಐಟಂ 3(ಆರ್) ರಲ್ಲಿ ವಿವರಿಸಿರುವಂತೆ, ಅಭ್ಯರ್ಥಿಯು ಗ್ರಾಮೀಣ ಪ್ರದೇಶಗಳಲ್ಲಿ 01ನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದಲ್ಲಿ ಶೇ.25ರಷ್ಟು ಸ್ಥಾನಗಳನ್ನು ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕಾಯ್ದಿರಿಸಲಾಗಿದೆ.

ಕರ್ನಾಟಕ ಮುನ್ಸಿಪಾಲಿಟೀಸ್ ಆಕ್ಟ್ 1964ರ ಕರ್ನಾಟಕ ಮುನ್ಸಿಪಾಲಿಟೀಸ್ ಕಾರ್ಪೋರೇಷನ್ ಆಕ್ಟ್ 1976ರಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ. ಇಡಿ 01 ಟಿಇಸಿ 2002, ದಿನಾಂಕ: 01-02-2002 ಮತ್ತು ಕರ್ನಾಟಕ ನಾಗರೀಕಾ ಸೇವೆಗಳ ಅಧಿನಿಯಮ 2000 (ಕರ್ನಾಟಕ ಅಧಿನಿಯಮ 2001ರ ನಿಯಮ (1)ರಡಿ ಗ್ರಾಮೀಣ ಅಭ್ಯರ್ಥಿಗಳ ಮೀಸಲಾತಿಯಡಿ ನೇಮಕಾತಿಗೆ ನಿಗಧಿಪಡಿಸಲಾಗಿರುವ ಅರ್ಹತೆಗಳಿಗನುಸಾರವಾಗಿ ಅಭ್ಯರ್ಥಿಯು ಕೆಳಕಂಡ ಪ್ರದೇಶಗಳನ್ನು ಹೊರತುಪಡಿಸಿದ ಸ್ಥಳಗಳಲ್ಲಿ ಕನಿಷ್ಠ 10 ವರ್ಷಗಳವರೆಗೆ 01ನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿ ಅಭ್ಯರ್ಥಿಗಳು ಗ್ರಾಮೀಣ ಕೋಟಾದಲ್ಲಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

ದೊಡ್ಡ ನಗರ ಪ್ರದೇಶ, ಚಿಕ್ಕ ನಗರ ಪ್ರದೇಶ ಅಥವಾ Transitional ಪ್ರದೇಶಗಳು.

ಕೆನೆಪದರ ವ್ಯಾಪ್ತಿಯಲ್ಲಿ ಬರುವ ಪೋಷಕರನ್ನು ಹೊರತುಪಡಿಸಿದ ಅಭ್ಯರ್ಥಿಗಳು ಕನಿಷ್ಠ 10 ವರ್ಷಗಳವರೆಗೆ 01ನೇ ತರಗತಿಯಿಂದ 10ನೇ ತರಗತಿಯವರೆಗೆ ಮೇಲ್ಕಂಡ ಸ್ಥಳಗಳನ್ನು ಹೊರತುಪಡಿಸಿದ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿರುವ ಅಭ್ಯರ್ಥಿಗಳು ಮಾತ್ರ ಗ್ರಾಮೀಣ ಕೋಟಾದಲ್ಲಿ ಕ್ಲೇಮು ಮಾಡಲು ಅರ್ಹರು. ಆದಾಗ್ಯೂ ಮೇಲ್ಕಂಡ ಪ್ರದೇಶಗಳಿಗೆ ಅಧಿಸೂಚನೆ ಹೊರಡಿಸುವ ಮುಂಚೆ 01ನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದಲ್ಲಿ ಅಂತಹ ಅಭ್ಯರ್ಥಿಗಳೂ ಸಹ ಗ್ರಾಮೀಣ ಕೋಟಾದಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

- **ಕನ್ನಡ ಮಾಧ್ಯಮ ಅಭ್ಯರ್ಥಿಗಳು:**

ಸರ್ಕಾರದ ಆದೇಶ ಸಂಖ್ಯೆ. ಇಡಿ 91 ಯುಆರ್‌ಸಿ 2002, ದಿನಾಂಕ:31-07-2002ರನ್ವಯ ಅಭ್ಯರ್ಥಿಯು 01ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದಲ್ಲಿ, ಕನ್ನಡ ಮಾಧ್ಯಮ ಕೋಟಾದಲ್ಲಿ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕಾಯ್ದಿರಿಸಿರುವ ಶೇ.5ರ ಸ್ಥಾನಗಳಿಗೆ ಕ್ಲೇಮು ಮಾಡಬಹುದಾಗಿದೆ.

- **ವಿಕಲಚೇತನ ಅಭ್ಯರ್ಥಿಗಳು:**

ವಿಕಲಚೇತನ ಅಭ್ಯರ್ಥಿಗಳಿಗೆ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಶೇ.3ರಷ್ಟು ಸ್ಥಾನಗಳನ್ನು ಕಾಯ್ದಿರಿಸಲಾಗಿದೆ. ಅರ್ಹ ವಿಕಲಚೇತನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿರುತ್ತದೆ.

**ವಿಶೇಷ ಸೂಚನೆ:**

ಪ್ರವೇಶ ಪ್ರಕ್ರಿಯೆಯ ಸಂಬಂಧಪಟ್ಟ 21 ನೋಡಲ್ ಸೆಂಟರ್‌ಗಳಲ್ಲಿ ಸೀಟು ಆಯ್ಕೆ ವೇಳೆಯಲ್ಲಿ ಈ ಕೆಳಗೆ ನಮೂದಿಸಿದ ಮೂಲ ದಾಖಲೆಗಳನ್ನು ತಪ್ಪದೇ ಸಲ್ಲಿಸತಕ್ಕದ್ದು. ಸಲ್ಲಿಸದೇ ಇರುವಂತಹ ಅಭ್ಯರ್ಥಿಗಳಿಗೆ ಸೀಟು ಆಯ್ಕೆಗೆ ಅವಕಾಶವಿರುವುದಿಲ್ಲ.

ಅ) 02 ವರ್ಷಗಳ ಐ.ಟಿ.ಐ ಅಂಕಪಟ್ಟಿ & ಪ್ರಮಾಣ ಪತ್ರ.
ಆ) ಎಸ್.ಎಸ್.ಎಲ್.ಸಿ/ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ.
ಇ) ಮೂಲ ವರ್ಗಾವಣೆ ಪ್ರಮಾಣ ಪತ್ರ.

ಈ) ಕರ್ನಾಟಕದಲ್ಲಿ 01ನೇ ತರಗತಿಯಿಂದ 02 ವರ್ಷಗಳ ಐ.ಟಿ.ಐ ವರೆಗೆ ಕನಿಷ್ಠ 05 ವರ್ಷ ವ್ಯಾಸಂಗ ಮಾಡಿದ ಬಗ್ಗೆ ವ್ಯಾಸಂಗ ಪ್ರಮಾಣ ಪತ್ರ. ಈ ಪ್ರಮಾಣ ಪತ್ರವನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಅಥವಾ ಉಪ ನಿರ್ದೇಶಕರು ಇವರಿಂದ ಧೃಡೀಕರಿಸಿರಬೇಕು.

ಉ) 01ನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿದ ಬಗ್ಗೆ ವ್ಯಾಸಂಗ ಪ್ರಮಾಣ ಪತ್ರ. ಈ ಪ್ರಮಾಣ ಪತ್ರವನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಅಥವಾ ಉಪ ನಿರ್ದೇಶಕರು ಇವರಿಂದ ಧೃಡೀಕರಿಸಿರಬೇಕು. ಹಾಗೂ ಕನ್ನಡ ಮಾಧ್ಯಮ / ಗ್ರಾಮೀಣ ಕೋಟಾದಡಿ ಪ್ರವೇಶ ಬಯಸುವ ಅಭ್ಯರ್ಥಿಗಳು ಸಂಬಂಧಿಸಿದ ಪ್ರಮಾಣ ಪತ್ರವನ್ನು ಸಲ್ಲಿಸುವುದು. (ಗ್ರಾಮೀಣ ಕೋಟಾದಡಿ ಪ್ರವೇಶ ಬಯಸುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು **"ಪರಿಶೀಲನಾ ಪ್ರಮಾಣ ಪತ್ರ"** ಸಲ್ಲಿಸತಕ್ಕದ್ದು).

ಊ) ಮೀಸಲಾತಿಯಡಿ ಕ್ಲೇಮು ಮಾಡುವ ಅಭ್ಯರ್ಥಿಗಳು ಮೂಲ ಜಾತಿ ಪ್ರಮಾಣ ಪತ್ರವನ್ನು ಮತ್ತು ಆದಾಯ ಪ್ರಮಾಣ ಪತ್ರವನ್ನು ನೋಡಲ್ ಸೆಂಟರ್‌ಗಳಲ್ಲಿ ಪ್ರವೇಶ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸಬೇಕು. ಮೀಸಲಾತಿ/ಆದಾಯ ಪ್ರಮಾಣ ಪತ್ರ ಸಲ್ಲಿಸದೇ ಇರುವ ಅಭ್ಯರ್ಥಿಗಳು ನಿಯಮಗಳ ಪ್ರಕಾರ ಪ್ರವೇಶಕ್ಕೆ ಇರಬೇಕಾದ ಇತರೇ ಅರ್ಹತೆಗಳನ್ನು ಪೂರೈಸಿದ್ದಲ್ಲಿ ಸಾಮಾನ್ಯ ಗುಂಪಿನಡಿ ಪರಿಗಣಿಸಲಾಗುವುದು

ಋ) ವೈದ್ಯಕೀಯ ಪ್ರಮಾಣ ಪತ್ರವನ್ನು ನೊಂದಾಯಿಸಿದ ಅಧೀಕೃತ ವೈದ್ಯರಿಂದ ಪಡೆದು ಸಲ್ಲಿಸಬೇಕು.

ಎ) ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ 04 ಭಾವಚಿತ್ರಗಳು.

## ಇತರೆ ಮಾಹಿತಿಗಳು:

1. **ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದ ಅರ್ಜಿಗಳನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ವೆಬ್‌ಸೈಟ್ www.dte.kar.nic.in, www.dtekarnataka.in & www.diplomaadmission.in ನಿಂದ ಡೌನ್‌ಲೋಡ್ (DownLoad) ಮಾಡಿಕೊಂಡು, ಸದರಿ ಅರ್ಜಿಯನ್ನು ಭರ್ತಿ ಮಾಡಿ ಸಂಬಂಧಿಸಿದ 21 ನೋಡಲ್ ಸೆಂಟರ್‌ಗೆ ಸಲ್ಲಿಸುವುದು.**
2. ಅಭ್ಯರ್ಥಿಗೆ ಸಂಬಂಧಿಸಿದ ಎಲ್ಲಾ ಮೂಲ ದಾಖಲೆಗಳನ್ನು 21 ನೋಡಲ್ ಸೆಂಟರ್‌ಗಳಲ್ಲಿ ಪ್ರವೇಶ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸಬೇಕು.
3. ವಿವಿಧ ಮೀಸಲಾತಿಯಡಿ ಅಂದರೆ, ಪ.ಜಾ, ಪ. ಪಂ, ವರ್ಗ-1, 2ಎ, 2ಬಿ, 3ಎ, 3ಬಿ ಮತ್ತು ಗ್ರಾಮೀಣ ಅಭ್ಯರ್ಥಿಗಳಿಗೆ ಅನ್ವಯವಾಗುವಂತೆ ಪ್ರಸ್ತುತ ಜಾರಿಯಲ್ಲಿರುವ ಸರ್ಕಾರಿ ಆದೇಶಗಳನ್ವಯ ಸ್ಥಾನಗಳನ್ನು ಕಾಯ್ದಿರಿಸಲಾಗಿದೆ.
4. ಪ್ರವೇಶಕ್ಕೆ ಸಂಬಂಧಿಸಿದಂತೆ ಹೊರಡಿಸಲಾಗುವ ಅಧಿಸೂಚನೆಯನ್ವಯ ಅರ್ಹತೆ, ವಿನಾಯಿತಿ, ಮೀಸಲಾತಿ ಹಾಗೂ ಇತರೆ ಅಂಶಗಳು ಇರುತ್ತವೆ.
5. ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದಂತೆ, ಪಾಲಿಟೆಕ್ನಿಕ್‌ಗಳು ಮತ್ತು ಕೋರ್ಸುಗಳ (ಸರ್ಕಾರಿ ಮತ್ತು ಅನುದಾನಿತ) ವಿವರವನ್ನು ಸಂಬಂಧಪಟ್ಟ 21 ನೋಡಲ್ ಸೆಂಟರ್‌ಗಳಲ್ಲಿ ಪಡೆಯಬಹುದಾಗಿರುತ್ತದೆ.
6. ಪ್ರವೇಶಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ನಿಗಧಿಪಡಿಸಿದ 21 ನೋಡಲ್ ಸೆಂಟರ್‌ಗಳಿಂದ ಪಡೆಯಬಹುದಾಗಿದೆ.
7. ಅಭ್ಯರ್ಥಿಗಳಿಗೆ ಪ್ರವೇಶಕ್ಕೆ ಸಂಬಂಧಿಸಿದಂತೆ ಸಂದರ್ಶನ ಪತ್ರವನ್ನು ಪ್ರತ್ಯೇಕವಾಗಿ ಕಳುಹಿಸುವುದಿಲ್ಲ. ಪ್ರಯುಕ್ತ, ಅಭ್ಯರ್ಥಿಗಳು ಪ್ರವೇಶಕ್ಕೆ ಸಂಬಂಧಿಸಿದ ಸೀಟು ಆಯ್ಕೆ ಪ್ರಕ್ರಿಯೆ ದಿನಾಂಕವನ್ನು ಸಂಬಂಧಪಟ್ಟ ನೋಡಲ್ ಸೆಂಟರ್‌ಗಳಿಂದ ಪಡೆಯಬಹುದಾಗಿರುತ್ತದೆ.
8. ಪ.ಜಾ, ಪ.ಪಂ, ವರ್ಗ-1, 2ಎ, 2ಬಿ, 3ಎ, 3ಬಿ ಮತ್ತು ಗ್ರಾಮೀಣ ಮೀಸಲಾತಿಯನ್ನು ಕರ್ನಾಟಕ ಅಭ್ಯರ್ಥಿಗಳು ಮಾತ್ರ ಪಡೆಯಲು ಅರ್ಹರಾಗಿರುತ್ತಾರೆ.

## ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದ ಶುಲ್ಕ:

ಸರ್ಕಾರದ ಆದೇಶಗಳ ಸಂಖ್ಯೆ. ಇಡಿ 119 ಟಿಪಿಇ 2005, ದಿನಾಂಕ:18-10-2005 ಹಾಗೂ ಇಡಿ 10 ಟಿಪಿಇ 2012, ದಿನಾಂಕ:29-05-2012 ರನ್ವಯ ಸರ್ಕಾರಿ, ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ